**2ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ರಾಣೇಬೆನ್ನೂರು.**

**ಅಪರಾಧಿಕ ಪ್ರಕರಣ ಸಂಖ್ಯೆ : 405/2018**

ಪಿರ್ಯಾದಿ ಬಸನಗೌಡ ತಂದೆ ಶಿವನಗೌಡ ಪಾಟೀಲ,
ವಯಾಃ ವಯಸ್ಕ, ಉಃ ವ್ಯಾಪಾರ ಮತ್ತು ಕೃಷಿ,
ಸಾಃ ವಾಗೀಶ ನಗರ, ರಾಣೇಬೆನ್ನೂರು.

-ವಿರುದ್ಧ-

ಆರೋಪಿತರುಃ 1) ಪ್ರಭು ಉರ್ಫ್ ಪ್ರಭುಗೌಡ ಸಿದ್ದನಗೌಡ ಮಲ್ಲಾಡದ
ವಯಾಃ 40 ವರ್ಷ ಉಃ ವ್ಯಾಪಾರ ವ ಶೇತ್ಕರಿ
2) ಸಿದ್ದನಗೌಡ ತಂದೆ ಬಸನಗೌಡ ಮಲ್ಲಾಡದ
ವಯಾಃ 65 ವರ್ಷ ಉಃ ವ್ಯಾಪಾರ ವ ಶೇತ್ಕರಿ
3) ಬಾಬು ಉರ್ಫ್ ಬಸನಗೌಡ ತಂದೆ ಸಿದ್ನಗೌಡ ಮಲ್ಲಾಡದ
ವಯಾಃ 45 ವರ್ಷ ಉಃ ವ್ಯಾಪಾರ ವ ಶೇತ್ಕರಿ
ಎಲ್ಲರೂ ಸಾಃ ಶಿಡೇನೂರ, ತಾಲೂಕಃ ಬ್ಯಾಡಗಿ ಜಿಃ ಹಾವೇರಿ.

**ದಂಡ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 313 ರ ಅಡಿಯಲ್ಲಿ ಆರೋಪಿತ ಹೆಚ್ಚುವರಿ ಹೇಳಿಕೆ.**

**ಪ್ರಶ್ನೆಃ 1** ನೀವು ಈ ಪ್ರಕರಣದ ಪಿರ್ಯಾದಿ ನುಡಿದ ಸಾಕ್ಷ್ಯವನ್ನು ಕೇಳಿದ್ದೀರಾ?
**ಉತ್ತರಃ** ಕೇಳಿದ್ದೇನೆ

**ಪ್ರಶ್ನೆಃ 2** ಪಿರ್ಯಾದಿದಾರರು ತಮ್ಮ ಸಾಕ್ಷ್ಯದಲ್ಲಿ ನೀವು ಪಿರ್ಯಾದಿದಾರರು ಚಿರಪರಿಚಿತರು ಇದ್ದು ನೀವು ಶಿಡೇನೂರ ಕಲ್ಲೇಶ್ವರ ಆ್ಯಂಡ್ ಕಂಪನಿಯ ಪಾಲುಗಾರಿಕೆ ನಡೆಸುತ್ತಾ ಬಂದಿದ್ದು, 1 ಮತ್ತು 3 ನೇ ಆರೋಪಿತರಾದ ನೀವು 2 ನೇ ಆರೋಪಿಯ ಮಕ್ಕಳು ಇದ್ದು, ನೀವು ಎಲ್ಲರೂ ಕೂಡಿಯೇ ಪಾಲುಗಾರಿಕೆಯನ್ನು ನಡೆಸುತ್ತಾ ಬಂದಿದ್ದು, 1 ನೇ ಆರೋಪಿಯಾದ ನೀನು ಪಿರ್ಯಾದಿಯೊಂದಿಗೆ ಇರುವ ಸಲುಗೆಯಿಂದ ನೀನು ನಿನ್ನ ಪಾಲುಗಾರಿಕೆ ಸಂಸ್ಥೆಯ ವ್ಯವಹಾರದ ನಿಮಿತ್ತ ಮತ್ತು ವ್ಯಾಪಾರ ನಿಮಿತ್ತ ಮತ್ತು ಸಾಲ ವೆಗ್ಗೈರೆ ತೀರಿಸುವುದಕ್ಕೆ ಅಂತಾ ಪಿರ್ಯಾದಿಗೆ ರೂ. 6,00,000/- ರೂಗಳನ್ನು 2014 ನೇ

ಮಾರ್ಚ ತಿಂಗಳಲ್ಲಿ ಕೈಗಡ ಸಾಲ ಎಂದು ಪಿರ್ಯಾದಿಯನ್ನು ಕೇಳಿದ್ದು ಇರುತ್ತದೆ ಎಂದು ಸಾಕ್ಷಿ ನುಡಿದಿರುತ್ತಾರೆ ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃಸುಳ್ಳು.

**ಪ್ರಶ್ನೆಃ 3** ಪಿರ್ಯಾದಿ ಮುಂದುವರೆದು ಆಗ ಪಿರ್ಯಾದಿದಾರರು ನಿಮ್ಮ ಮೇಲಿನ ವಿಶ್ವಾಸದಿಂದ ನಿಮಗೆ ದಿಃ 15–03–2014 ರಂದು ಅವರು ರಾಣೇಬೆನ್ನೂರು ಮನೆಯಲ್ಲಿ 1 ನೇ ಆರೋಪಿಯ ಕೈಗೆ ಕೊಟ್ಟಿದ್ದು ಹಾಗೂ ಸದರ ಹಣವನ್ನು 3 ತಿಂಗಳ ನಂತರ ವಾಪುಸ್ಸು ಕೊಡುವುದಾಗಿ ಹೇಳಿದ್ದು, ನಂತರ 3 ತಿಂಗಳು ಕಳೆದರೂ ನೀವು ಪಿರ್ಯಾದಿದಾರರಿಂದ ಪಡೆದುಕೊಂಡ ಹಣವನ್ನು ಪಿರ್ಯಾದಿಯು ಅನೇಕ ಸಾರಿ ಕೇಳಿದ್ದು ನೀವು ಇಂದು ನಾಳೆ ಅಂತಾ ಸುಳ್ಳು ಸಬೂಬು ಹೇಳುತ್ತಾ ಬಂದಿದ್ದು, ನಂತರ ಪಿರ್ಯಾದಿ ಒತ್ತಾಯ ಮಾಡಿದ್ದರಿಂದ 1 ನೇ ಆರೋಪಿಯು ಉಳಿದ ಆರೋಪಿಗಳ ಪರವಾಗಿ ಅದೇ ದಿವಸ ಶ್ರೀ ಗಜಾನನ ಅರ್ಬನ ಕೋಂ ಆಪರೇಟೀವ ಬ್ಯಾಂಕ್ ಶಾಖೆ ಬ್ಯಾಡಗಿ ಸಂಸ್ಥೆ ಖಾತೆ ಹೊಂದಿದ ಅಕೌಂಟನ ಒಂದು ಚೆಕ್ಕನ್ನು ರೂ. 6,00,000/– ಗಳಿಗೆ ಮಜಕೂರು ನಮೂದು ಮಾಡಿ ಪಿರ್ಯಾದಿಗೆ ಕೊಟ್ಟಿದ್ದು ಇರುತ್ತದೆ ಎಂದು ಸಾಕ್ಷಿ ನುಡಿದಿರುತ್ತಾರೆ, ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃಸುಳ್ಳು.

ಪ್ರಶ್ನೆಃ **4** ಮುಂದುವರೆವರೆದು ಪಿರ್ಯಾದಿದಾರರು ನೀವು ಹೇಳಿದಂತೆ ದಿಃ 25-01-2018 ರಂದು ಪಿರ್ಯಾದಿಯು ತನ್ನ ಖಾತೆ ಹೊಂದಿದ ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕ ಶಾಖೆ ರಾಣೆಬೆನ್ನೂರು ಇವರಲ್ಲಿ ಕಲೆಕ್ಷನಗೆ 1 ನೇ ಆರೋಪಿ ಕೊಟ್ಟ ಚೆಕ್ಕನ್ನು ಹಾಕಿದಾಗ ಸದರ ಬ್ಯಾಂಕಿನವರು ನಿಮ್ಮ ಖಾತೆ ಫ್ರೀಜ್ ಆಗಿದೆ ಅಂತಾ ಚೆಕ್ ಬೌನ್ಸ್ ಆಗಿರುತ್ತದೆ ಅಂತಾ ಹಿಂಬರಹದೊಂದಿಗೆ ದಿಃ 25-01-2018 ರಂದು ವಾಪಸ್ಸು ಕಳುಹಿಸಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ, ಇದಕ್ಕೆ ನೀವು ಏನು ಹೇಳುತ್ತೀರಿ ?

ಉತ್ತರಃಸುಳ್ಳು.

ಪ್ರಶ್ನೆಃ **5** ಮುಂದುವರೆದು ಪಿರ್ಯಾದಿದಾರರು ನೀವು ಕೊಟ್ಟ ಚೆಕ್ ಅಮಾನ್ಯಗೊಂಡಿದ್ದರ ಬಗ್ಗೆ ಮತ್ತು ಚೆಕ್ಕಿನ ಮೊತ್ತವನ್ನು ವಾಪಸ್ಸು ಕೊಡಿರಿ ಅಂತಾ ಮಾಗಣಿ ಮಾಡಿ ದಿಃ 22-02-2018 ರಂದು ಪಿರ್ಯಾದಿದಾರರು ತಮ್ಮ ವಕೀಲರ ಮೂಲಕ ಕಾನೂನು ರೀತ್ಯಾ ನೋಟೀಸನ್ನು ನಿಮ್ಮ ವಿಳಾಸಕ್ಕೆ ಕಳುಹಿಸಿದ್ದು, ಸದರಿ ನೋಟೀಸು 2 ಮತ್ತು 3 ನೇ ಆರೋಪಿಗಳಿಗೆ ದಿಃ 24-02-2018 ರಂದು ಜಾರಿಯಾಗಿದ್ದು, ಮತ್ತು 1 ನೇ ಆರೋಪಿಯು ನಾಟ್ ಕ್ಲೇಮ್ಡ್ ಮಾಡಿದ್ದು, ಅವನಿಗೂ ಸಹ ದಿಃ 04-03-2018 ರಂದು ಜಾರಿ ಆದಂತೆಯೇ ಆಗುತ್ತದೆ ಎಂದು ನುಡಿದಿರುತ್ತಾರೆ, ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃಸುಳ್ಳು.

ಪ್ರಶ್ನೆಃ **6** ಮುಂದುವರೆದು ಪಿರ್ಯಾದಿದಾರರು ನೀವು ಕೊಟ್ಟ ಚೆಕ್ಕು ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲದ್ದು ಗೊತ್ತಿದ್ದರೂ ಸಹ ದುರುದ್ದೇಶದಿಂದ ಮತ್ತು ಮೋಸ ವಂಚನೆ ಮಾಡುವ ಉದ್ದೇಶದಿಂದ ಚೆಕ್ಕನ್ನು ಕೊಟ್ಟಿದ್ದು ಹಾಗೂ 1 ನೇ ಆರೋಪಿಯು ಉಳಿದ ಆರೋಪಿಗಳ ಪರವಾಗಿ ಸಹ ಸಾಲವನ್ನು ತೀರಿಸಲು ಚೆಕ್ಕನ್ನು ನೀಡಿ ನೆಗೋಶಿಯಬಲ್ ಇನ್ಸ್ಟ್ರುಮೆಂಟ್ ಕಾಯ್ದೆ ಕಲಂ 138 ಹಾಗೂ 142 ರ ಅಡಿಯಲ್ಲಿ ಅಪರಾಧ ಮಾಡಿದ್ದೀರಾ ಎಂದು ನುಡಿದಿರುತ್ತಾರೆ ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃಸುಳ್ಳು.

**ಪ್ರಶ್ನೆಃ** 7 ನೀನು ಮತ್ತೇನಾದರೂ ಹೇಳುವುದು ಅಥವಾ ದಾಖಲೆ ಸಲ್ಲಿಸುವುದು

ಇದೆಯಾ?

ಉತ್ತರಃ ಇಲ್ಲ.

**ಪ್ರಶ್ನೆಃ 8** ನಿಮ್ಮ ಪರ ಸಾಕ್ಷಿ ವಿಚಾರಣೆ ಮಾಡಿಸುತ್ತೀರಾ?

ಉತ್ತರಃ ಮಾಡಿಸುತ್ತೇವೆ

(ಆರೋಪಿತರ ಹೇಳಿಕೆಯನ್ನು ಅವರು ಹೇಳಿದಂತೆ ಬರೆದುಕೊಳ್ಳಲಾಗಿದೆ ಅಂತ

ದೃಡೀಕರಿಸುತ್ತೇನೆ.)

ಸಹಿ/-

2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ರಾಣೇಬೆನ್ನೂರು.

ಸಹಿ/-

ಆರೋಪಿತರ ಸಹಿ